ಅನುದಾನಿತ ವಿದ್ಯಾರ್ಥಿನಿಲಯಗಳ ಬಗ್ಗೆ

೬೧೯. ಶ್ರೀ ಮನೋಹರ ಐನಾಪುರ (ಬಳ್ಳೊಳ್ಳಿ).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗಾಗಿ ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳಿಗೆ ೧೯೮೯-೯೦ರಲ್ಲಿ ಮಾನ್ಯತೆ ನೀಡಿರುವ ಸಂಖ್ಯೆ ಎಷ್ಟು ?

ಆ) ಜಿಲ್ಲಾ ಪರಿಷತ್ ಹಾಗೂ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಂದ ಮಾನ್ಯತೆಗಾಗಿ ಬಂದ ಪ್ರಸ್ತಾವನೆಗಳು ಎಷ್ಟು ? ಹಾಗೂ, ಎಷ್ಟು ಪ್ರಸ್ತಾವನೆಗಳನ್ನು ವಿಲೇವಾರಿ ಮಾಡಿದೆ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು).—

ಅ) ಇಲ್ಲ

ಆ) ೧೨ ಪ್ರಸ್ತಾವನೆಗಳು ಬಂದಿದ್ದು, ಅವುಗಳು ಸರ್ಕಾರದ ಪರಿಶೀಲನೆಯಲ್ಲಿವೆ.

ಶ್ರೀ ಮನೋಹರ್ ಐನಾಪುರ.— ಮಾನ್ಯ ಅಧ್ಯಕ್ಷರೇ, ಸುಮಾರು ೧೨ ಪ್ರಸ್ತಾವನೆಗಳು ಬಂದಿದ್ದು ಅವು ಸರ್ಕಾರದ ಪರಿಶೀಲನೆಯಲ್ಲಿವೆ ಎಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಸರ್ಕಾರಕ್ಕೆ ಹಣದ ಕೊರತೆ ಇಲ್ಲ. ಆದರೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜನಾಂಗದ ವಿದ್ಯಾರ್ಥಿ ನಿಲಯಗಳಿಗೆ ಸಮಾಜ ಕಲ್ಯಾಣ ಅಧಿಕಾರಿಗಳು ಹಾಗೂ ಜಿಲ್ಲಾ ಪರಿಷತ್‌ನವರು ಶಿಫಾರಸ್ಸು ಮಾಡಿ, ನಿರ್ದೇಶಕರು, ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಕಳಿಸಿದ್ದರೂ ಕೂಡ ಅವುಗಳಿಗೆ ಮಾನ್ಯತೆ ನೀಡಿ ಅನುದಾನದ ಮಂಜೂರಾತಿಯನ್ನು ನೀಡಿಲ್ಲ. ಮಾನ್ಯ ಮಂತ್ರಿಗಳು ಅದಕ್ಕೆ ಕಾರಣವೇನು ಎಂದು ತಿಳಿಸಬಹುದೇ ?

ಶ್ರೀ ಬಿ. ಶಿವಣ್ಣ.— ಮಾನ್ಯ ಅಧ್ಯಕ್ಷರೆ, ವರ್ಷದ ಕೊನೆಯಲ್ಲಿ ಈ ಪ್ರಸ್ತಾವನೆಗಳು ಬಂದ ಕಾರಣ ನಾವು ಪರಿಶೀಲನೆ ಮಾಡುತ್ತಾ ಇದ್ದೇವೆ.

ಶ್ರೀ ಮನೋಹರ್ ಐನಾಪುರ.— ಹಲವಾರು ಸಂಘ ಸಂಸ್ಥೆಗಳವರು ಸುಮಾರು ೭-೮ ವರ್ಷಗಳಿಂದ ಈ ವಿದ್ಯಾರ್ಥಿನಿಲಯಗಳನ್ನು ನಡೆಸಿಕೊಳ್ಳುತ್ತಾ ಬಂದಿದ್ದಾರೆ. ಪ್ರಸಕ್ತ ಸಾಲಿನಲ್ಲಿ ಈ ವಿದ್ಯಾರ್ಥಿನಿಲಯಗಳಿಗೆ ಮಾನ್ಯತೆ ನೀಡಿ ಅನುದಾನ ಬಿಡುಗಡೆ ಮಾಡದೇ ಇದ್ದರೆ ಈ ವಿದ್ಯಾರ್ಥಿ ನಿಲಯಗಳನ್ನು ಓಪನ್ ಮಾಡಲಾರದೆ ಪರಿಶಿಷ್ಟ ಜಾತಿ, ಪರಿಶಿಷ್ಟ ಜನಾಂಗದ ವಿದ್ಯಾರ್ಥಿಗಳು ಬೀದಿಪಾಲಾಗಬೇಕಾಗುತ್ತದೆ. ಆದಕ್ಕೋಸ್ಕರವಾಗಿ ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಇನ್ನು ಇಷ್ಟು ದಿನಗಳಲ್ಲಿ ನಿರ್ದಿಷ್ಟವಾಗಿ ಈ ವಿದ್ಯಾರ್ಥಿ ನಿಲಯಗಳಿಗೆ ಮಾನ್ಯತೆ ನೀಡಿ ಅನುದಾನವನ್ನು ಬಿಡುಗಡೆ ಮಾಡುತ್ತೇವೆ ಎಂದು ಹೇಳುತ್ತೀರ.

ಶ್ರೀ ಬಿ. ಶಿವಣ್ಣ.— ಮಾನ್ಯ ಅಧ್ಯಕ್ಷರೆ, ಒಂದು ವಾರದಲ್ಲಿ ನಾನು ಹೇಳುತ್ತೇನೆ, ಪರಿಶೀಲನೆ ಮಾಡುತ್ತಾ ಇದ್ದೇವೆ ಎಂದು ಹೇಳಿದ್ದೇನೆ.

ಜಾನ್‌ಸನ್ ಮತ್ತು ಜಾನ್‌ಸನ್ ಕಂಪನಿಗೆ ವಿದ್ಯುತ್ ಸಂಪರ್ಕ

೬೩೩. ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ).—ಮಾನ್ಯ ಕೈಗಾರಿಕೆ, ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕುಣಿಗಲ್ ತಾಲ್ಲೂಕಿನಲ್ಲಿರುವ ಜಾನ್‌ಸನ್ ಮತ್ತು ಜಾನ್‌ಸನ್ ಕಂಪನಿಗೆ ವಿದ್ಯುತ್ ಸಂಪರ್ಕ ಒದಗಿಸಲಾಗಿದೆಯೇ?

(ಆ) ಹಾಗಿದ್ದಲ್ಲಿ ಈ ಕಂಪನಿಗೆ ವಿದ್ಯುತ್ ನೀಡಿರುವುದರಿಂದ ಮಾಗಡಿ ತಾಲ್ಲೂಕು ತಿಪ್ಪಸಂದ್ರ ಹೋಬಳಿಯಲ್ಲಿ ರೈತರ ಪಂಪುಸೆಟ್ಟುಗಳು ಸುಟ್ಟು ಹೋಗಿರುವುದು ನಿಜವೆ?

(ಇ) ಹಾಗಿದ್ದಲ್ಲಿ, ಈ ಕಂಪನಿಯವರಿಗೆ ಪ್ರತ್ಯೇಕ ವಿದ್ಯುತ್ ಸಂಪರ್ಕ ಒದಗಿಸಿ, ರೈತರಿಗಾಗುತ್ತಿರುವ ತೊಂದರೆ ನಿವಾರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್.ಎಂ. ಯಾಹ್ಯ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು).—

(ಅ) ಹೌದು,

(ಆ) ಈ ವಿಷಯ ನಮ್ಮ ಗಮನಕ್ಕೆ ಬಂದಿಲ್ಲ.